ಗೆಲ್ತಾರೆ'' ಎಂದು ಹೇಳುತ್ತಾ ಅವಿರೋಧ ಆಯ್ಕೆಯ ಪ್ರಸ್ತಾವವನ್ನು ಖಂಡಾತುಂಡವಾಗಿ ಧಿಕ್ಕರಿಸಿದ್ದ. ಹಾಗಾಗಿ, ಹಳೆಪಾರ್ಟಿಯ ಹುಲಿಗಳು ಅಕ್ಕಯ್ಯಮ್ಮನ ಬಳಿ ನಾಮಿನೇಶನ್ ಫೈಲು ಮಾಡಿಸಲು ತೀರ್ಮಾನಿಸಿ ಆವೊತ್ತೇ ಒಳ್ಳೆಯ ಘಳಿಗೆಯಲ್ಲಿ ಬ್ಯಾಲ್ಯದ ಪಂಚಾಯ್ತಿ ಆಫೀಸಿನಲ್ಲಿ ನಾಮಿನೇಶನ್ ಫೈಲು ಮಾಡಿ ಬಂದಿದ್ದರು. ಅದಾದ ಮರುದಿನ ಪೊಲೀಸ್ ನಂಜುಂಡ ತನ್ನ ಹೆಂಡತಿ ಜಯಮ್ಮನ ಕೈಯ್ಯಲ್ಲಿ ಮತ್ತು ಗುಲ್ಲೀರಣ್ಣನ ಮಗ ಬಡ್ರಂಗ ತನ್ನ ಸೊಸೆ ಕಮಲಮ್ಮನ ಕೈಯ್ಯಲ್ಲಿ ನಾಮಿನೇಶನ್ ಫೈಲ್ ಮಾಡಿಸಿದ್ದರು.

ಅಕ್ಕಯ್ಯಮ್ಮ ಮಂಡಲ್ ಪಂಚಾಯ್ತಿ ಮೆಂಬರ್ ಎಲೆಕ್ಷನ್ನಿಗೆ ನಿಂತಿರುವ ಸುದ್ದಿ ಸುತ್ತೆಂಟು ಊರುಗಳಲ್ಲಿ ಢಾಣಾಡಂಗುರವಾಗಿ ಕೆಲವು ಮುಖ್ಯಸ್ಥರು ಬಂದು ಅಕ್ಕಯ್ಯಮ್ಮನಲ್ಲಿ ಧೈರ್ಯ ಮತ್ತು ಆತ್ಮವಿಶ್ವಾಸಗಳನ್ನು ತುಂಬಿ ಅದಕ್ಕೆ ಉಡುಗೊರೆಯಾಗಿ ಅಕ್ಕಯ್ಯಮ್ಮ ಹಾಕಿಕೊಟ್ಟ ಒಂದೆರಡು ಆಮ್ಲೇಟುಗಳನ್ನು ಹೊಟ್ಟೆಗಿಳಿಸಿಕೊಂಡು ಹೋಗುತ್ತಿದ್ದರು. ಸುದ್ದಿ ತಿಳಿದು ಅಂಗನವಾಡಿ ಮೇಡಂ ಸರೋಜಮ್ಮ ಅಕ್ಕಯ್ಯಮ್ಮನ ಮನೆಗೆ ಬಂದು, ''ನಾನೇಳಿರಲಿಲ್ವ ಅಕ್ಕಯ್ಯಮ್ಮ, ಅಂಗನವಾಡಿ ಬಿಟ್ಟ ಮೇಲೆ ನೀನು ಏಳ್ಗೆ ಆಗ್ತೀಯ ಅಂತ. ನೋಡು ನೀನು ಗೆದ್ರೆ ನಮ್ಮ ಅಂಗನವಾಡಿಯನ್ನೂ ಇನ್ಸ್‌ಫೆಕ್ಷನ್ ಮಾಡೋ ಪವರ್ ಬರ್ತದೆ. ಯಂಗೋ ರಂಗನಾಥಸ್ವಾಮಿ ಒಳ್ಳೇದು ಮಾಡ್ತಾನೇಳು'' ಎಂದು ಒಂದೊಳ್ಳೆ ಮಾತನ್ನು ಹೇಳಿ ಹೋಗಿದ್ದರು. ಮೊಟ್ಟೆ ತರಲೆಂದು ಹನುಮಂತಪುರದ ಅಶ್ವತ್ಥಪ್ಪನ ಕೋಳಿಫಾರಂಗೆ ಹೋದಾಗ ಅಶ್ವತ್ಥಪ್ಪ ಫಾರಂನಲ್ಲಿಯೇ ಇದ್ದರು. ''ಬಾ ಬಾ ಅಕ್ಕಯ್ಯಮ್ಮ, ಸುದ್ದಿ ಕಿವಿಗೆ ಬಿತ್ತು. ರಾಜ್ಕೀಯದ ಸಹವಾಸ ನಿಂಗೇನೂ ಬೇಕಿರ್ಲಿಲ್ಲ. ರಾಜ್ಕೀಯದಲ್ಲಿ ಯಾರನ್ನೂ ನಂಬಂಗಿಲ್ಲ. ಕಾಲ ಹಂಗಾಗೋಗೈತೆ. ರಂಗಕ್ಕೆ ಇಳಿಯೋದು ಇಳಿದ್ಬಿಟ್ಟಿದ್ದೀಯ. ಆದ್ರೆ ದುಡ್ ಗಿಡ್ ಕಳ್ಕೊಬೇಡ. ನಾನು ಫ್ರೀಯಾಗಿ ಮೂರು ಸಾವಿರ ಮೊಟ್ಟೆ ಕೊಡ್ತೀನಿ. ಬಂದೋರ್ಗೆಲ್ಲ ಆಮ್ಲೇಟ್ ಹಾಕಿಕೊಟ್ಟು ಓಟು ಕೇಳು. ಹಣದ ಋಣಕ್ಕಿಂತ ಅನ್ನದ ಋಣ ದೊಡ್ಡದು. ವರ್ಕೌಟ್ ಆದ್ರೂ ಆಗಬಹುದು...'' ಎಂದು ಆಶೀರ್ವಾದ ನೀಡಿದ್ದ ಅಶ್ವತ್ಥಪ್ಪ. ಕ್ಷಣ ಅಕ್ಕಯ್ಯಮ್ಮ ಭಾವುಕಳಾದಳು. ಕಣ್ಣಂಚಿನಲ್ಲಿ ಸಣ್ಣಗೆ ನೀರು ಇಣುಕಿತ್ತು. ''ಅಣ್ಣಯ್ಯ ನಿನ್ನ ಋಣ ಯಂಗಪ್ಪ ತೀರ್ಸೋದು. ಯಾವ ಜನ್ಮದಲ್ಲಿ ನೀನು ನಂಗೆ ತಂದೆ ಆಗಿದ್ದೋ, ಅಣ್ಣ ಆಗಿದ್ದೋ. ಏಳೇಳು ಜನ್ಮಕ್ಕೂ ನಿನ್ನ ಉಪಕಾರಾನ ಮರೆಯಲ್ಲಪ್ಪ...'' ಎಂದು ಕೃತಜ್ಞತೆಗಳನ್ನು ಸಲ್ಲಿಸಿದ್ದಳು. ಆಮ್ಲೇಟ್ ಅಂಗಡಿಯನ್ನು ಸ್ಟಾರ್ಟ್ ಮಾಡಿದಾಗ ಅಕ್ಕಯ್ಯಮ್ಮನಿಗೆ ಇನ್ನಿಲ್ಲದ ಸಪೋರ್ಟ್ ಮಾಡಿ ತನ್ನ ಮಗನನ್ನು ಅಕ್ಕಯ್ಯಮ್ಮನ ಅಂಗಡಿಗೆ ಸಹಾಯಕನಾಗಿ ಕಳುಹಿಸಿಕೊಟ್ಟಿದ್ದ ಈರಪ್ಪನೋರ ವೆಂಕಟೇಶ ಅಕ್ಕಯ್ಯಮ್ಮನ ರಾಜಕೀಯ ಪ್ರವೇಶದ ತೀರ್ಮಾನದಿಂದ ಬಲು ಖುಷಿಪಟ್ಟಿದ್ದ. ವೆಂಕಟೇಶನದೇನು ಕಡಿಮೆ ಬುರ್ಡೆ ಆಗಿರಲಿಲ್ಲ. ಒಂದು ವೇಳೆ ಅಕ್ಕಯ್ಯಮ್ಮ ಗೆದ್ದು ಮರ್ಯಾದೆಗೆ ಕಟ್ಟು ಬಿದ್ದು ಆಮ್ಲೇಟ್ ಅಂಗಡಿಯನ್ನು ಮುಚ್ಚಲು ಮುಂದಾದರೆ ಅದನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ತನ್ನ ಮಗನ ಮೇಲೆ ಹೊರಿಸುವುದು ಅಥವಾ ಅಕ್ಕಯ್ಯಮ್ಮ ತುಂಬಾ ಬಿಜಿಯಾದರೆ ಅಂಥ ಟೈಮನ್ನು ನಿಭಾಯಿಸಲು ಮಗನನ್ನು ಅಂಗಡಿಗೆ ಪಾರ್ಟ್‌ನರ್ ಮಾಡುವುದು ವೆಂಕಟೇಶನ ಪ್ಲಾನ್ ಆಗಿತ್ತು. ನಾಮಿನೇಶನ್ ದಿನ ವೆಂಕಟೇಶನೇ ಮುಂದಾಳತ್ವ ವಹಿಸಿದಿದ್ದು. ನಾಮಿನೇಶನ್ ದಿನಾನೇ ಅಕ್ಕಯ್ಯಮ್ಮನಿಗೆ ಚುನಾವಣಾ ಚಿನ್ಹೆಯಾಗಿ ಮೊಟ್ಟೆಯನ್ನು ಕೊಡಬೇಕೆಂದು ಅಕ್ಕಯ್ಯಮ್ಮನಿಂದ ಮನವಿ ಪತ್ರವನ್ನೂ ಕೊಡಿಸಿ ಬಂದಿದ್ದ! ಊರಲ್ಲಿ ಬಹುತೇಕರು ಅಕ್ಕಯ್ಯಮ್ಮನ ರಾಜಕೀಯ ಪ್ರವೇಶವನ್ನು ಒಪ್ಪಿಕೊಂಡಿದ್ದರು.

ಎಲೆಕ್ಷನ್ ವಾರ ಇರುವಂತೆ ಪ್ರಚಾರ ರಂಗು ಪಡೆದುಕೊಂಡಿತ್ತು. ಊರು, ಹೊಲ, ತೋಟ ಮುಂತಾದ ಕಡೆ ಚುನಾವಣಾ ಅಭ್ಯರ್ಥಿಗಳು ಓಟನ್ನು ಕೇಳುವ ಅಭಿಯಾನ ಬಿರುಸುಗೊಂಡಿತ್ತು. ನಾನು ಗೆದ್ರೆ ಅದು ಮಾಡ್ತೀನಿ, ನಾನು ಗೆದ್ರೆ ಇದು ಮಾಡ್ತೀನಿ ಎಂದು ಕ್ಯಾಂಡಿಡೇಟುಗಳು